ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 29.08.2024.

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಡಿ.ಎಸ್.ಎನ್. ವಕೀಲರಿಂದಃ

ನನಗೆ ಸುಮಾರು 44 ವರ್ಷ ವಯಸ್ ಇರುತ್ತದೆ. ನನ್ನ ಮದುವೆ ಚಿಂಚನಸೂರು ಗ್ರಾಮದಲ್ಲಿ ಸುಮಾರು 25 ವರ್ಷಗಳ ಹಿಂದೆ ಆಗಿರುತ್ತದೆ. ನನಗೆ ಮೂರು ಜನ ಮಕ್ಕಳು ಅವರ ಪೈಕಿ ಇಬ್ಬರು ಗಂಡು ಮತ್ತು ಒಬ್ಬ ಹೆಣ್ಣು ಮಗಳು ಇರುತ್ತಾರೆ. ಅವರುಗಳ ಮದುವೆಯಾಗಿಲ್ಲ, ಚಿಕ್ಕವರು ಇರುತ್ತಾರೆ. ಚಿಂಚನಸೂರು ಗ್ರಾಮದಲ್ಲಿ ನನ್ನ ಗಂಡನ ಜಮೀನು ಇರುತ್ತದೆ, ಅದರ ಸರ್ವೆ ನಂಬರ

ಹೇಳಲು ಬರುವುದಿಲ್ಲ. ಅದು 2 ಎಕರೆ ತೋಟ ಇರುತ್ತದೆ. ವಾದಿ ನನ್ನ ತಂದೆ. ಪ್ರತಿವಾದಿಯ ಪರಿಚಯ ನನಗೆ ಇರುತ್ತದೆ. ಪ್ರತಿವಾದಿಗೆ 4 ಜನ ಹೆಣ್ಣು ಮಕ್ಕಳು, ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಪ್ರತಿವಾದಿ ಮಕ್ಕಳು ಎಲ್ಲರು ಜೀವಂತ ಇದ್ದಾರೆ.

ದಾವಾ ಸ್ವತ್ತಿನ ಸರ್ವೆ ನಂ.287/1ರ ಇರುತ್ತದೆ, ಅದು 12 ಎಕರೆ 26 ಗುಂಟೆ ಇರುತ್ತದೆ. ಅದರ ಚೆಕ್‌ಬಂದಿ ನನಗೆ ಗೊತ್ತಿದೆ, ಪೂರ್ವಕ್ಕೆ ಸರ್ಕಾರಿ ನಾಲಾ, ಪಶ್ಚಿಮಕ್ಕೆ ಸರ್ಕಾರಿ ರಸ್ತೆ, ಉತ್ತರಕ್ಕೆ ಗುಂಡಪ್ಪ ಚಂದಪ್ಪ ಅಗಸರ ರವರ ಜಮೀನು ಇರುತ್ತದೆ, ದಕ್ಷಿಣಕ್ಕೆ ಮಹಾಪುರತಾಯಿ ದೇವಸ್ಥಾನ ರಸ್ತೆ ಇರುತ್ತದೆ. ದಾವಾ ಸ್ವತ್ತು ಪ್ರತಿವಾದಿಗೆ ಅವರ ಹಿರಿಯರಿಂದ ಬಂದಿರುತ್ತದೆ. ದಾವಾ ಸ್ವತ್ತು ಎಕರೆಗೆ ಅಂದಾಜು ರೂ.8 ಲಕ್ಷ ಬೆಲೆ ಬಾಳುತ್ತದೆ ಎಂದರೆ, ಸಾಕ್ಷಿ ಈಗ ಸುಮಾರು ರೂ.5-6 ಲಕ್ಷ ಇರಬಹುದು ಎಂದು ನುಡಿಯುತ್ತಾರೆ. ಖರೀದಿ ಕಾಲಕ್ಕೆ ದಾವಾ ಸ್ವತ್ತು ಅಂದಾಜು ಎಕರೆಗೆ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ, ಏಕೆಂದರೆ ಪ್ರತಿವಾದಿ ನನಗೆ ಹೇಳಿಲ್ಲ. ನನ್ನ ಪ್ರಕಾರ ಎಕರೆಗೆ ಎಷ್ಟು ಬೆಲೆ ಬಾಳುತ್ತಿತ್ತು ಎಂದು ಕೂಡಾ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಎಕರೆಗೆ ರೂ.10 ಲಕ್ಷ ಈಗ ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ.

ನಾನು ನಿಪಿ-2ರ ವ್ಯವಹಾರ ಆಗುವ ಕಾಲಕ್ಕೆ ಹಾಜರಿದ್ದೆ. ಸದರಿ ವ್ಯವಹಾರ ಪ್ರತಿವಾದಿಯ ಮನೆಯಲ್ಲಿ ಸುಮಾರು 14 ವರ್ಷಗಳ ಹಿಂದೆ ಆಗಿರುತ್ತದೆ. ಸದರಿ ವ್ಯವಹಾರದ ಕಾಲಕ್ಕೆ, ಪ್ರತಿವಾದಿ, ನನ್ನ ತಂದೆ ವಾದಿ, ನಾನು, ನನ್ನ ಗಂಡ, ಪ್ರತಿವಾದಿ ಮಕ್ಕಳು ಮತ್ತು 4 ಜನ ಹಿರಿಯರು ಇದ್ದರು. ಸದರಿ ಹಿರಿಯರ ಹೆಸರು ಸುದಾಮ ಧನ್ನಿ, ಗುಂಡಪ್ಪ ರಾಮನ್, ಪಾಂಡುರಂಗ ಮಾವಿನಕರ್ ಮತ್ತು ಶಿವಶರಣಪ್ಪ ಕಡೋಳೆ ರವರು ಹಾಜರಿದ್ದರು. ಸದರಿ ವ್ಯವಹಾರ ಬೆಳಿಗ್ಗೆ 11-12.00 ಗಂಟೆಗೆ ಆಗಿರುತ್ತದೆ. ಸದರಿ ವ್ಯವಹಾರದ ಕಾಲಕ್ಕೆ ಪ್ರತಿವಾದಿಯರು ರೂ.15 ಲಕ್ಷಕ್ಕೆ ಕೇಳಿರುತ್ತಾರೆ. ನನ್ನ ತಂದೆ ರೂ.7 ಲಕ್ಷಕ್ಕೆ ಕೇಳಿರುತ್ತಾರೆ. ನಂತರದಲ್ಲಿ ಮಾತುಕತೆಯಾಗಿ ರೂ.10,40,000/- ಕ್ಕೆ ವ್ಯವಹಾರ

ಆಗಿರುತ್ತದೆ. ಮಾತುಕತೆಯಾದ ಕಾಲಕ್ಕೆ ಯಾವುದೇ ಹಣ ಕೊಟ್ಟಿಲ್ಲ ಹಾಗೂ ಯಾವುದೇ ದಾಖಲೆ ಬರೆದಿಲ್ಲ. ಸದರಿ ವ್ಯವಹಾರ ಬೇಸಿಗೆ ಕಾಲದಲ್ಲಿ ಆಗಿರುತ್ತದೆ, ದಿನಾಂಕ ನೆನಪು ಇಲ್ಲ, ಆದರೆ ಮಾಪುರತಾಯಿ ಜಾತ್ರೆ ಕಾಲಕ್ಕೆ ಆಗಿರುತ್ತದೆ.

2 ತಿಂಗಳ ನಂತರ ನನ್ನ ತಂದೆ ಹಣ ಕೊಡಲು ಹೋದಾಗ, ಪ್ರತಿವಾದಿ ನನ್ನ ಒಟ್ಟು ಹಣ ಬೇಕು, ಸಾಲ ಆಗಿದೆ ಎಂದು ಹೇಳಿರುತ್ತಾರೆ. ಆ ಕಾರಣ ನನ್ನ ತಂದೆ 2 ತಿಂಗಳ ಟೈಮ್ ತೆಗೆದುಕೊಂಡು, ಹಣವನ್ನು ಪ್ರತಿವಾದಿಗೆ ಕೊಟ್ಟಿರುತ್ತಾರೆ. ಹಣವನ್ನು ಆಳಂದದ ದಸ್ತುರೂ ಬರಹಗಾರರಾದ ಮಡ್ಡೆ ರವರ ಕಛೇರಿಯಲ್ಲಿ ಕೊಟ್ಟಿರುತ್ತೇವೆ. ಸದರಿ ಹಣಕೊಟ್ಟ ತಾರಿಕು ನಿಖರವಾಗಿ ನೆನಪು ಇಲ್ಲ, ಆದರೆ 7 ನೇ ತಿಂಗಳಲ್ಲಿ ಕೊಟ್ಟಿರುತ್ತೇವೆ, 2017ರಲ್ಲಿ ಕೊಟ್ಟಿರುತ್ತೇವೆ. ಹಣ ಕೊಡುವ ಕಾಲಕ್ಕೆ ನಾನು ಕೂಡಾ ಹಾಜರಿದ್ದೆ. ಸದರಿ ಹಣದ ಮುಖ ಬೆಲೆ ರೂ.1,000/-, ರೂ.100/- ಹಾಗೂ ರೂ.50/- ಮುಖ ಬೆಲೆಯ ನೋಟುಗಳು ಇದ್ದವು. ಎಷ್ಟು-ಎಷ್ಟು ಕಟ್‌ಗಳು ಇದ್ದವು ಎಂದು ಗೊತ್ತಿಲ್ಲ. ಆ ಕಾಲಕ್ಕೆ ನನ್ನ ತಂದೆ, ಪ್ರತಿವಾದಿ ಹಾಗೂ ಅವರ ಸಂಗಡ ಬಂದ ಸಾಕ್ಷಿಗಳು ನಿಪಿ-2ರ ದಾಖಲೆಗೆ ಸಹಿ ಮಾಡಿರುತ್ತಾರೆ. ನಾನು ನಿಪಿ-2ರ ದಾಖಲೆಗೆ ಸಹಿ ಮಾಡಿಲ್ಲ. ಏಕಂದರೆ ನನ್ನ ಬಾವ ಸುದಾಮ ಇದ್ದ, ಆ ಕಾರಣ ನಾವು ಸಹಿ ಮಾಡಿಲ್ಲ. ತದನಂತರ ಮಡ್ಡೆ ರವರ ಕಛೇರಿಯಲ್ಲಿ ಹಣ ಕೊಟ್ಟ ಸಹಿ ಮಾಡಿದ ಮೇಲೆ ನಾವೆಲ್ಲರೂ ನಮ್ಮ ಮನೆಗೆ ಹೊರಟು ಹೋಗಿರುತ್ತೇವೆ ಎಂದರೆ ಸರಿ. ಆ ಕಾಲಕ್ಕೆ ಪ್ರತಿವಾದಿ ಮಕ್ಕಳು ಹಾಜರಿದ್ದರು. ಆದರೆ ನಿಪಿ-2ರ ದಾಖಲೆಗೆ ಸಹಿ ಮಾಡಿಲ್ಲ. ಪ್ರತಿವಾದಿ ಮಕ್ಕಳಾದ ರಾಮಕೃಷ್ಣ, ಯಶೋಧಾ ಬಂದಿದ್ದರು, ಉಳಿದವರು ಬಂದಿರಲಿಲ್ಲ. ದಾವಾ ಸ್ವತ್ತು ಹಿರಿಯರಿಂದ ಬಂದಿದ್ದರಿಂದ ನಮಗೆ ಅವರ ಮಕ್ಕಳ ಸಹಿ ಪಡೆದುಕೊಳ್ಳಬೇಕೆಂದು ಅನ್ನಿಸಲಿಲ್ಲವೇ ಎಂದರೆ, ಸಾಕ್ಷಿ ಪ್ರತಿವಾದಿ ಅದು ತನ್ನ ಸ್ವಂತ ಜಮೀನು ಇದೆ ಆ ಕಾರಣ ಮಕ್ಕಳ ಸಹಿ ಬೇಡ ಎಂದು ಹೇಳಿರುತ್ತಾರೆ.

ನನ್ನ ತಂದೆ ಗುಜರಾತದಲ್ಲಿ ಖಾಸಗಿ ಕೆಮಿಕಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ತಂದೆ ಅಪ್ಪಗಿ ಗ್ರಾಮದವರು ಎಂದರೆ ಸರಿ. ಚಿಂಚನಸೂರು ಮತ್ತು ಅಪ್ಪಗಿಗೆ ಸುಮಾರು 6-7 ಕಿ.ಮೀ. ಅಂತರ ಇದೆ. ನನ್ನ ತಂದೆ ಖಾಯಂ ಆಗಿ ಗುಜರಾತನ ವಾಪಿ ಗ್ರಾಮದಲ್ಲಿ ಇರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೊದಲು ಇಲ್ಲಿಯೇ ಇರುತ್ತಿದ್ದರು, ಆದರೆ ಈಗ ಆರಾಮ ಇಲ್ಲದೇ ಇರುವ ಕಾರಣ ಅಲ್ಲಿಗೆ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ನಿಪಿ-2ರ ವ್ಯವಹಾರ ಮಾಡುವ ಕಾಲಕ್ಕೆ ಚಿಂಚನಸೂರದಲ್ಲಿ ಇದ್ದರು, ಹಾಗೇ ಬರುವುದು, ಹೋಗುವುದು ಮಾಡುತ್ತಾರೆ. ನನ್ನ ತಂದೆ ಖಾಯಂ ಆಗಿ ಗುಜರಾತನ ವಾಪಿ ಗ್ರಾಮದಲ್ಲಿ ಇರುತ್ತಾರೆ ಯಾವತ್ತೋ ಒಮ್ಮೆ ಬಂದು ಹೋಗುತ್ತಾರೆ ಎಂದರೆ ಸರಿಯಲ್ಲ.

ಪ್ರತಿವಾದಿ ತನ್ನ ಅಡಚಣೆ ಸಲುವಾಗಿ ರೂ.5 ಲಕ್ಷದ ಸಾಲದ ಅಡಚಣೆ ಇತ್ತು ಆ ಕಾರಣ ನನ್ನ ತಂದೆ ಹತ್ತಿರ ಕೇಳಿದಾಗ, ನನ್ನ ತಂದೆ ರೂ.5 ಲಕ್ಷ ಹಣ ಕೊಟ್ಟು, ಏನಾದರೂ ಆಧಾರ ಬರೆದುಕೊಡಿ ಎಂದು ಕೇಳಿದ್ದಕ್ಕೆ ಪ್ರತಿವಾದಿ ದಾವಾ ಜಮೀನನ್ನು ನನ್ನ ತಂದೆಗೆ ಅಡಮಾನ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ನನ್ನ ಬಾವನ ಜೊತೆ ಸೇರಿಕೊಂಡು ನಿಪಿ-2ರ ದಾಖಲೆಯನ್ನು ಪ್ರತಿವಾದಿಯಿಂದ ಮೋಸ ಮಾಡಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ತಾನು ಪಡೆದುಕೊಂಡ ರೂ.5 ಲಕ್ಷ ಸಾಲದ ಹಣವನ್ನು ಕೊಡುತ್ತೇನೆ ಎಂದು, ನನ್ನ ತಂದೆಗೆ ಮನೆಗೆ ಸಾಕಷ್ಟು ಬಾರಿ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಆಗ ನನ್ನ ತಂದೆ ತಾನು ಯುಗಾದಿ ಬರುತ್ತೇನೆ ಆಗ ಪಡೆದುಕೊಳ್ಳುತ್ತೇನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ.

ತದನಂತರ ಪ್ರತಿವಾದಿ ದಿಃ 01.07.2013 ರಂದು ನನ್ನ ತಂದೆಗೆ ಮನೆಗೆ ಹೋಗಿ ನಿಮ್ಮ ಹಣ ಕೊಡುತ್ತೇನೆ ಎಂದು ಹೇಳಿದಾಗ, ನನ್ನ ತಂದೆ ನಾನು ಎಳ್ಳ ಅಮಾವಾಸೆಗೆ ಬರುತ್ತೇನೆ ಆವಾಗ ಕೊಡಿರಿ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ತದನಂತರ ಪ್ರತಿವಾದಿ ಎಳ್ಳ ಅಮಾವಾಸೆ ದಿನ ಪುನಃ

ಹೋದಾಗ ನನ್ನ ತಂದೆ ಬರಲಿಲ್ಲ ಹಾಗೂ ಹಣ ಪ್ರತಿವಾದಿಯಿಂದ ಪಡೆಯಲಿಲ್ಲ, ವಿನಾಕಾರಣ ಬರುತ್ತೇನೆ ಎಂದು ಸುಳ್ಳು ಹೇಳಿರುತ್ತಾರೆ ಎಂದರೆ ಸರಿಯಲ್ಲ. ತದನಂತರ ಪ್ರತಿವಾದಿ ತಾನು ಪಡೆದುಕೊಂಡ ಹಣವನ್ನು ನನ್ನ ತಂದೆಗೆ ಮರಳಿ ಕೊಡಬೇಕೆಂಬ ಉದ್ದೇಶದಿಂದ ದಿಃ 09.06.2017 ರಂದು ಶ್ರೀ ಎಸ್.ಡಿ.ಬೋಸಗೆ ವಕೀಲರಿಂದ ಒಂದು ಕಾನೂನು ಬದ್ಧ ನೋಟೀಸ್ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನೋಟೀಸ್‌ನ್ನು ಕೂಡಾ ನನ್ನ ತಂದೆ ತೆಗೆದುಕೊಳ್ಳದೇ ದಾವಾ ಸ್ವತ್ತುನ್ನು ಕಬಳಿಸಬೇಕೆಂಬ ಉದ್ದೇಶದಿಂದ, ಈ ಸುಳ್ಳು ದಾವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**